# ನಿಜವಾದ ಸಾಧು

ಒಂದು ಊರಿನ ಕೆರೆಯ ತೀರದಲ್ಲಿ ಒಬ್ಬ ಸಾಧು ವಾಸಿಸುತ್ತಿದ್ದ. ಅವನು ಆ ಕೆರೆಯ ನೀರಿನಲ್ಲಿ ತನ್ನ ಆಹ್ನಿಕಗಳನ್ನೆಲ್ಲಾ ಮುಗಿಸಿ, ಅದೇ ಕೆರೆಯ ಯಾವುದಾದರೂ ಒಂದು ಕಲ್ಲಿನ ಮೇಲೆ ಕುಳಿತು ಧ್ಯಾನ ಮಾಡುತ್ತಿದ್ದ. ಅದೇ ಕೆರೆಗೆ ಆ ಊರಿನ ಅಗಸ ಬಟ್ಟೆಯ ಹೊರೆ ಹೊತ್ತುಕೊಂಡು ಬರುತ್ತಿದ್ದ. ಅವನು ಬಟ್ಟೆ ಒಗೆಯಲು ಒಂದು ನಿಗದಿಯಾದ ಕಲ್ಲನ್ನು ಇಟುಕೊಂಡಿದ್ದ. ಆ ಕಲ್ಲಿನ ಬಳಿ ಹೊರೆ ಇಳಿಸಿ, ತಾನು ತಂದಿದ್ದ ಎಲ್ಲಾ ಬಟ್ಟೆಗಳನ್ನೂ ಒಗೆದು ತೆಗೆದುಕೊಂಡು ಹೋಗುತ್ತಿದ್ದ. ಒಂದು ದಿನ ಸಾಧು ಕೆರೆಗೆ ಬಂದವನು ತನ್ನ ಆಹ್ನಿಕಗಳನ್ನು ಮುಗಿಸಿ, ಅಗಸ ಪ್ರತಿದಿನ ಬಟ್ಟೆ ಒಗೆಯುತ್ತಿದ್ದ ಕಲ್ಲಿನ ಮೇಲೆ ಧ್ಯಾನಕ್ಕೆ ಕುಳಿತ. ಅಲ್ಲಿ ಪ್ರತಿದಿನ ಅಗಸ ಬಟ್ಟೆ ಒಗೆಯುವನು ಎಂದು ಅವನಿಗೆ ಚೆನ್ನಾಗಿ ಗೊತ್ತಿತ್ತು.



ಯಾವುದೆಂದರೆ ಆ ಕಲ್ಲಿನ ಮೇಲೆ ಬಟ್ಟೆ ಒಗೆಯಲಾಗುವುದಿಲ್ಲ, ಕುಳಿತುಕೊಳ್ಳುವುದಾದರೆ ಕುಳಿತುಕೊಳ್ಳುವಷ್ಟು ಅನುಕೂಲವಾಗಿದ್ದರೆ ಸಾಕು. 'ನಾನು ಮಾಡುವುದು ಮಹೋನ್ನತವಾದ ಕೆಲಸ, ಅವನಾದರೆ! ಏನು ಮಹಾ! ಬಟ್ಟೆ ಶುದ್ಧ ಮಾಡುವ ಕೆಲಸ. ನಾನು ಯೋಗಿ, ಅವನು ನನ್ನನ್ನು ಗೌರವಿಸಬೇಕು.' ಇದೇ ಮೊದಲಾದ ಧೋರಣೆಯೂ ಆ ಸಾಧುವಿನಲ್ಲಿ ಮನೆ ಮಾಡಿತ್ತು. ಅಗಸ ಬಂದ, ಸಾಧು ಆ ಕಲ್ಲಿನ ಮೇಲೆ ಧ್ಯಾನಕ್ಕೆ ಕುಳಿತಿದ್ದುದನ್ನು ನೋಡಿದ. ಅವನು ಕಾದ, ಬಹಳ ಹೊತ್ತು ಕಾದ. ಸೂರ್ಯ ಮೇಲೇರುತ್ತಿದ್ದಾನೆ, ಬಿಸಿಲು ತುಂಬಾ ಆಗಿಹೋದರೆ ಬಟ್ಟೆ ಒಗೆಯುವುದು ಕಷ್ಟವಾಗುತ್ತದೆ. ಸಾಧು ಜಾಗ ತೆರವು ಮಾಡುವ ಸೂಚನೆಯೇ ಕಾಣಲಿಲ್ಲ. ಆಗ ಆತ ಸಾಧುವನ್ನು ಪ್ರಾರ್ಥಿಸಿಕೊಂಡ: ''ಸ್ವಾಮಿ! ತಾವು ಬೇರೊಂದು ಕಲ್ಲಿನ ಮೇಲೆ ಕುಳಿತು ಧ್ಯಾನ ಮಾಡಿ, ಬಟ್ಟೆ ಯಾವುದೆಂದರೆ ಆ ಕಲ್ಲಿನ ಮೇಲೆ ಒಗೆಯಲಾಗುವುದಿಲ್ಲ. ಸೂರ್ಯ ಮೇಲೇರಿದರೆ ಬಟ್ಟೆ ಒಗೆಯಲೂ ಆಗುವುದಿಲ್ಲ'' — ಹೀಗೆ ಬೇರೆ ಬೇರೆ ರೀತಿಯಲ್ಲಿ ಮತ್ತೆ ಮತ್ತೆ ಪ್ರಾರ್ಥನೆ ಮಾಡಿಕೊಂಡ. ಆದರೆ ಸಾಧು ತಾನು ಆಳವಾದ ಧ್ಯಾನದಲ್ಲಿ ಮುಳುಗಿ ಸಮಾಧಿಸ್ಥಿತಿಯಲ್ಲಿರುವನೇನೋ ಎಂಬಂತೆ ಅಗಸನ ಯಾವ ಪ್ರಾರ್ಥನೆಗೂ ಪ್ರತಿಕ್ರಿಯಿಸದೆ ಶಿಲೆಯಂತೆಯೇ ಇದ್ದುಬಿಟ್ಟ. ಸಮಯ ಮೀರುತ್ತಿರುವುದನ್ನು ಗಮನಿಸಿ ಅಗಸನ ಸಹನೆ ಮೀರಿತು. ಅಗಸ ಸಾಧುವನ್ನು ಕೆಳಗಿಳಿಸಲು ಪ್ರಯತ್ನಿಸಿದ. ಸಾಧುವಿಗೆ ಇದು ಅವಮಾನವಾದಂತೆ ಅನ್ನಿಸಿತು. ಆದುದರಿಂದ ಸಾಧು ಅಗಸನನ್ನು ಪಕ್ಕಕ್ಕೆ ತಳ್ಳಿದ. ಎಷ್ಟೊಂದು ಪ್ರಾರ್ಥಿಸಿದರೂ ಪ್ರಾರ್ಥನೆ ಕೇಳದ್ದರಿಂದಲೇ ಸಾಧುವಿನ ಮೇಲೆ ಅಗಸನಿಗೆ ಬೇಸರವಾಗಿತ್ತು. ಈಗ ಸಾಧು ಸಿಟ್ಟಿಗೆ ಒಳಗಾಗಿರುವುದನ್ನು ನೋಡಿ ಅಗಸನಿಗೆ ಸಾಧುವಿನ ಮೇಲಿದ್ದ ಗೌರವ ಪೂರ್ಣವಾಗಿ ದೂರವಾಯಿತು. ಆ ತಾನು ಸಾಧುವನ್ನು ಬಲಾತ್ಕಾರದಿಂದ ಕಲ್ಲಿನಿಂದ ಕೆಳಕ್ಕೆ ಎಳೆದು ಬಿಟ್ಟನು. ಇದರಿಂದ ಸಾಧುವಿನ ಕೋಪ ಮತ್ತೂ ಹೆಚ್ಚಾಯಿತು. ಸಾಧು ಅಗಸನೊಡನೆ ಹೋರಾಟಕ್ಕಿಳಿದನು. ಆದರೆ ಅಗಸ ಹೆಚ್ಚು ಬಲಿಷ್ಠನಾದ ಕಾರಣ ಅಗಸ ಸಾಧುವನ್ನು ಕೆಳಗೆ ಬೀಳಿಸಿ, ಆತನ ಮೇಲೆ ಕುಳಿತ. ನೋವನ್ನು ಸಹಿಸಲಾರದ ಸಾಧು , ''ಓ ದೇವರೇ, ನನ್ನ ಮೇಲೆ ಆಗುತ್ತಿರುವ ಈ ದೌರ್ಜನ್ಯ ನಿನಗೆ ಕಾಣುತ್ತಿಲ್ಲವೆ? ನಾನು ನಿನ್ನನ್ನು ಪೂಜಿಸುವೆ, ಜಪ ಮಾಡುವೆ; ನಿನ್ನಲ್ಲಿ ಅತ್ಯಂತ ಭಕ್ತಿ ವಿಶ್ವಾಸ ಇಟ್ಟಿರುವೆ, ಆದರೂ ನೀನು ನನ್ನ ಸಹಾಯಕ್ಕೆ ಏಕೆ ಬರುತ್ತಿಲ್ಲ? ಅಗಸನ ಹಿಡಿತದಿಂದ ನನ್ನನ್ನು ಬಿಡಿಸಬಾರದೆ?'' ಎಂದು ಮೊರೆಯಿಟ್ಟ.

ಆ ಘಳಿಗೆಯಲ್ಲಿ ಸಾಧುವಿಗೆ ಒಂದು ಅಶರೀರವಾಣಿ ಕೇಳಿಸಿತು: ''ಯಾರು ಸಾಧು, ಯಾರು ಅಗಸ ಎಂಬ ನಿರ್ಣಯ ಮಾಡಲೇ ಆಗುತ್ತಿಲ್ಲ , ಆದ ಕಾರಣ ಸಹಾಯ ಮಾಡಲು ತಿಳಿಯುತ್ತಿಲ್ಲ'' — ಎಂದು. ಈ ಮಾತು ಕೇಳುತ್ತಿದ್ದಂತೆ ಸಾಧುವಿನಲ್ಲಿ ಜ್ಞಾನೋದಯವಾಯಿತು. 'ಸಾಧುವಿನಲ್ಲಿ ಇರಬೇಕಾದ ಯಾವ ನಡೆ ನನ್ನಲ್ಲಿ ಇದೆ? ಗರ್ವ, ಅಹಂಕಾರ, ಇತರರು ತನಗಿಂತ ಅತ್ಯಂತ ಕೀಳು ಎಂಬ ಧೋರಣೆ – ಇದೇ ಮೊದಲಾದ ಸಣ್ಣತನ ನನ್ನಲ್ಲಿ ಮನೆ ಮಾಡಿದೆ. ನಾನು ಮಹಾ ಸಂನ್ಯಾಸಿ ಎಂದು ಬೀಗುತ್ತಿದ್ದೆ' ಎಂದು ತನ್ನಲ್ಲೇ ಪರಾಮರ್ಶಿಸಿಕೊಂಡ ಆ ಸಾಧು. ಅವನ ಗರ್ವವೆಲ್ಲಾ ಅಡಗಿಹೋಯಿತು. ಅವನು ಅಗಸನಲ್ಲಿ ಕ್ಷಮೆ ಯಾಚಿಸಿದ. ತನ್ನದೇ ತಪ್ಪಾಯಿತು, ಇನ್ನೆಂದೂ ಹೀಗೆ ಮಾಡುವುದಿಲ್ಲ ನನ್ನನ್ನು ಬಿಟ್ಟು ಬಿಡು — ಎಂದು ಪ್ರಾರ್ಥಿಸಿದ. ಅಗಸ ಸಾಧುವನ್ನು ಬಿಟ್ಟು ತನ್ನ ಕೆಲಸದ ಕಡೆಗೆ ನಡೆದ.

ಅಂದಿನಿಂದ ಸಾಧು ಸತ್ಯ, ಕ್ಷಮೆ, ಸಹನೆ ಮೊದಲಾದ ಅನೇಕ ಗುಣಗಳನ್ನು ರೂಢಿಸಿಕೊಳ್ಳುತ್ತಾ ನಿಜವಾದ ಸಾಧುವಾದ, ಊರಿನವರೆಲ್ಲರ ಮನ್ನಣೆಗೆ ಪಾತ್ರನಾದ.

*(ಸಂಗ್ರಹ: ಡಾ. ಕೆ.ಎಲ್.ಪ್ರಸನ್ನಾಕ್ಷೀ)*